**<u>ದಿನಾಂಕ:28.12.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.</u>**

**<u>ಪಾಟೀಸವಾಲು: ಶ್ರೀ.ಎಸ್.ಜೆ ವಕೀಲರಿಂದ ಪಿರ್ಯಾಧಿಯ ಪರವಾಗಿ.</u>**

ನನಗೆ ಆಂಗ್ಲ ಭಾಷೆ ಓದಲು ಬೆರಯಲು ಬರುವುದಿಲ್ಲ. ನನಗೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ತಿಳಿದಿದೆ. ಪಿರ್ಯಾಧಿ ನನಗೆ ಪರಿಚಯ ಇರುವುದಿಲ್ಲ. ಅವರನ್ನು ಮೊದಲು ಬಾರಿ ನ್ಯಾಯಾಲಯದಲ್ಲೆ ನೋಡಿರುತ್ತೇನೆ. ಪಿರ್ಯಾಧಿಯ ಪರಿಚಯ ನನಗೆ ಸುಮಾರು 10 ವರ್ಷದಿಂದ ಇದ್ದು, ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾಧಿಯ ಮನೆ ಇರುವ ಚೀಮಸಂದ್ರಕ್ಕೆ ಹೋಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆ ಮಾತ್ರ ಚೀಮಸಂದ್ರದಲ್ಲಿ ಇರುತ್ತದೆ. ಪಿರ್ಯಾಧಿಯು ಕನ್ಸ್ ಟ್ರಕ್ಷನ್ ಕೆಲಸ ಮಾಡುತ್ತಾರೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ನಾನು 2017 ರಲ್ಲಿ ಪಿರ್ಯಾಧಿಗೆ ಸ್ವಲ್ಪ ಹಣದ ಸಹಾಯ ಮಾಡಿ ಎಂದು 4 ಲಕ್ಷ ರೂಗಳನ್ನು ನೀಡಲು ಕೇಳಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾಧಿಯು ದಿ:15.08.2017 ರಂದು ನನಗೆ 3,25,000/- ರೂಗಳನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಹಣವನ್ನು ನಾನು 6 ತಿಂಗಳಲ್ಲಿ ಹಿಂದಿರುಗಿಸುತ್ತೇನೆ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಣ ಹಿಂದಿರುಗಿಸದ ಕಾರಣ ಪಂಚಾಯಿತಿ ಮಾಡಿ ಆ ಸಮಯದಲ್ಲಿ ಚೆಕ್ ನಿಪಿ:1 ನ್ನು, 3,25,000/-ಕ್ಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಚೆಕ್ಕು ಸಾಕಷ್ಟು ಹಣ ಇರುವುದಿಲ್ಲವೆಂದು ಅಮಾನ್ಯಗೊಂಡಿರುತ್ತದೆ ಎಂದರೆ ಸರಿಯಲ್ಲ.

2. ನನ್ನ ಪ್ರಮಾಣ ಪತ್ರದ 3 ನೇ ಖಂಡಿಕೆಯಲ್ಲಿ ಹೇಳಿರುವ ವಿಷಯಗಳೆಲ್ಲ ಸತ್ಯವಾಗಿದ್ದು, ನಾನು ಯಲ್ಲಪ್ಪನವರ ಬಳಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿರುವ ವಿಷಯ ಸತ್ಯವಾಗಿರುತ್ತದೆ. ನಾನು ಪ್ರಮಾಣ ಪತ್ರದ 2 ನೇ ಖಂಡಿಕೆಯಲ್ಲಿ ಹೇಳಿರುವಂತೆ ಬೊಲೆರೋ ಕಾರನ್ನು 2,90,000/- ರೂಗಳಿಗೆ ಖರೀದಿ ಮಾಡಿರುವುದಿಲ್ಲ ಮತ್ತು 3,50,000/- ರೂಗಳಿಗೆ ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 5,000/- ರೂಗಳನ್ನು ಯಲ್ಲಪ್ಪನವರಿಗೆ ನಾನು ನೀಡಿದ್ದೇನೆ ಎಂದರೆ ಸರಿಯಲ್ಲ. ಬಾಕಿ 3,45,000/- ರೂಗಳಿಗೆ ನಾನು ಯಲ್ಲಪ್ಪರವರಿಗೆ ಚೆಕ್ಕನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಯಲ್ಲಪ್ಪನವರು ನನ್ನ ವಿರುದ್ದ ಒಂದು ಚೆಕ್ ಬೌನ್ಸ್ ಕೇಸ್ ಹಾಕಿದ್ದರು ಎಂದರೆ ಸರಿ. ಅದರ ಸಂಖ್ಯೆ ಸಿಸಿ ನಂಬರ್:2479/19 ಎಂದರೆ ಸರಿ.

3. ನಾನು 2,90,000/- ರೂಗಳನ್ನು ಯಲ್ಲಪ್ಪನವರಿಗೆ 2 ಕಂತಿನಲ್ಲಿ ನಗದಾಗಿ 1,40,000/- ರೂಗಳ ಮತ್ತು 1,50,000/- ರೂಗಳಂತೆ ನೀಡಿದ್ದೇನೆ. ಅದರ ಬಗ್ಗೆ ಯಾವುದೇ ದಾಖಲೆಯನ್ನು ನಾನು ಪಡೆದಿರುವುದಿಲ್ಲ. ನಾನು ಯಲ್ಲಪ್ಪನವರಿಗೆ ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಲ್ಲಪ್ಪನವರಿಗೆ ಮೂರು ಖಾಲಿ ಚೆಕ್ಕುಗಳನ್ನು ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದ 3 ನೇ ಖಂಡಿಕೆಯಲ್ಲಿ ಹೇಳಿರುವಂತೆ ಯಾವುದೇ ಭದ್ರತೆಗಾಗಿ ಮೂರು ಚೆಕ್ಕುಗಳನ್ನು ಯಲ್ಲಪ್ಪನವರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಯಲ್ಲಪ್ಪನವರು ಕಾರನ್ನು ಯಾರಿಂದ ಖರೀದಿ ಮಾಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ನಾನು ಯಲ್ಲಪ್ಪನವರಿಗೆ ಯಾವುದೇ ಖಾಲಿ ಚಾಪಕಾಗದದ ಮೇಲೆ ಸಹಿ ಮಾಡಿಕೊಟ್ಟಿರುವುದಿಲ್ಲ. ನಮ್ಮ ನಡುವೆ ಗಲಾಟೆ ಆಗಿದೆ ಎಂದು ಹೇಳಿದ್ದು, ಕೆಲಸದ ವಿಚಾರದಲ್ಲಿ ಸದರಿ ಗಲಾಟೆ ಆಗಿರುತ್ತದೆ. ಅದರ ಬಗ್ಗೆ ಯಾವುದೇ ದೂರನ್ನು ಪೋಲೀಸರಿಗೆ ನೀಡಿರುವುದಿಲ್ಲ.

4. ನಿಪಿಃ1 ಚೆಕ್ಕನ್ನು ನಾನು ಯಲ್ಲಪ್ಪನವರಿಗೆ ನೀಡಿರುವುದಿಲ್ಲ ಮತ್ತು ಪಿರ್ಯಾಧಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾಧಿಯಿಂದ 3,25,000/- ರೂಗಳನ್ನು ಸಾಲವಾಗಿ ಪಡೆದು ನಿಪಿಃ1 ನ್ನು ನೀಡಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೂರು ತಿಂಗಳಲ್ಲಿ ಹಣ ಹಿಂದಿರುಗಿಸುತ್ತೇನೆ ಎಂದು ಯಲ್ಲಪ್ಪನವರಿಗೆ ಹೇಳಿದ ಕಾರಣ ಯಲ್ಲಪ್ಪನವರು ನಿಡಿಃ6 ರಂತೆ ಸದರಿ ಪ್ರಕರಣವನ್ನು ಹಿಂಪಡೆದಿದ್ದಾರೆ ಎಂದರೆ ಸರಿಯಲ್ಲ. ಅವರಾಗಿಯೆ ಹಿಂಪಡೆದಿದ್ದಾರೆ. ನಿಪಿಃ1 ರಲ್ಲಿ ಇರುವ ಸಹಿ ನನ್ನದೇ ಆಗಿದ್ದು, ಸದರಿ ಚೆಕ್ಕು ನನಗೆ ಸೇರಿರುತ್ತದೆ ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು ಹಾಗೂ
24 ನೇ ಎಸಿಎಂಎಂ, ಬೆಂಗಳೂರು.